**Misc.101/18 PW 1**

**ದಿನಾಂಕಃ 07.01.2022**

**P.W 1**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಜಿ.ಕೆ.ಜಿ.ಎಸ್., ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆಃ-

1. 3 ನೋಟೀಸುಗಳನ್ನು ಕ್ರಮವಾಗಿ ಈಗ ನಿಪಿ.1 ರಿಂದ 3 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ.)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**

**ದಿನಾಂಕಃ 04.08.2023.**

**P.W 1**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಪಿ.ಎಸ್., ವಕೀಲರಿಂದಃ**

ನಾನು ಈ ದಿನ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

1. ಸರ್ವೆ ನಂ.58/1 ಆರ್ ಟಿ ಸಿ.
2. ಎಂ.ಆರ್. ಟಿ9 ಮ್ಯುಟೇಷನ್ ಆದೇಶ ಹಾಜರು ಪಡಿಸಿದೇನೆ.

ಅವುಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು.

**ಎದುರುದಾರರ ಪರ ವಕೀಲರ ವಿನಂತಿಯ ಮೇರೆಗೆ ವಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ರಾಮನಗರ.**

**ದಿನಾಂಕ ಃ 15.11.2024**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಜೆ.ಹೆಚ್.ಎಸ್.ಪಿ. ವಕೀಲರಿಂದಃ**

ನನ್ನ ಜಮೀನಿನ ಸರ್ವೆ ನಂ.58/1. ಆ ಜಮೀನಿನಲ್ಲಿ 17 ಗುಂಟೆ ಪ್ರದೇಶದಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ. ಎದುರುದಾರರು ನನ್ನ ಜಮೀನಿನಲ್ಲಿ ಕೇವಲ 16 ವರೆ ಗುಂಟೆ ಪ್ರದೇಶದಲ್ಲಿ ಮಾತ್ರ ಲೈನು ಎಳೆದಿದ್ದಾರೆ ಎಂದರೆ ಸರಿ. ನನ್ನ ಜಮೀನಿನ ಅಪಮೌಲ್ಯಕ್ಕಾಗಿ ಎದುರುದಾರರು ನನ್ನ ಖಾತೆಗೆ 2,72,250/- ರೂ.ಗಳನ್ನು ಜಮಾ ಮಾಡಿದ್ದಾರೆ ಎಂದರೆ ಸರಿ. ಬೆಳೆ ನಷ್ಟ ಪರಿಹಾರವಾಗಿ 11,968/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ.

2. ನನ್ನ ಜಮೀನಿನಲ್ಲಿದ್ದ 17 ತೆಂಗಿನ ಸಸಿಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 91,885/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಜಮೀನಿನಲ್ಲಿದ್ದ 30 ಅಡಿಕೆ ಸಸಿಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 12,373/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಜಮೀನಿನಲ್ಲಿದ್ದ 3 ಕಾಡು ಮರಗಳನ್ನು ಕಟಾವು ಮಾಡಿದರ ಬಾಬ್ತು ಎದುರುದಾರರು ನನಗೆ 3,080/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ಒಟ್ಟಾರೆಯಾಗಿ ನನಗೆ 3,91,556/- ರೂ.ಗಳನ್ನು ಖಾತೆಗೆ ಜಮಾ ಮಾಡಿದ್ದಾರೆ ಎಂದರೆ ಸರಿ. 2018 ರಲ್ಲಿ ನನ್ನ ಜಮೀನಿನಲ್ಲಿ ಎದುರುದಾರರು ಲೈನ್ ಎಳೆದಿದ್ದಾರೆ.

3. ನನ್ನ ಜಮೀನಿನಲ್ಲಿ 1 ಗುಂಟೆ ಜಮೀನಿಗೆ ಲೈನ್ ಎಳೆಯುವ ಕಾಲಕ್ಕೆ ಬೆಲೆ 75,000/- ರೂ.ಗಳು ಇದೆ ಎಂದು ತೋರಿಸಲು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಜಮೀನಿನ ಅಪಮೌಲ್ಯ, ಬೆಳೆ ನಷ್ಟ ಪರಿಹಾರ, ಮರಗಳ ಬಾಬ್ತು ಪರಿಹಾರ ಎಲ್ಲಾ ಸೇರಿ ಎದುರುದಾರರು ನನಗೆ 3,91,556/- ರೂ.ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಎದುರುದಾರರು ನನ್ನ ಜಮೀನಿಗೆ ಲೈನು ಎಳೆಯುವ ಕಾಲಕ್ಕೆ ಇದ್ದ ಸೂಕ್ತ ಬೆಲೆಯನ್ನು ನೀಡಿದ್ದರೂ ಸಹ ಹೆಚ್ಚಿನ ಪರಿಹಾರ ಕೇಳಿ, ನಾನು

ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ರಾಮನಗರ.